**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ. ನ್ಯಾಯಾಲಯ, ವಿರಾಜಪೇಟೆ.**

**ಕ್ರಿಮೊ ಸಂಖ್ಯೆ: 947/2021.**

ಪಿರ್ಯಾದಿಃ ರಾಜ್ಯ ಸರ್ಕಾರ,
ಸಿದ್ದಾಪುರ ಪೊಲೀಸ್ ಠಾಣೆ.

ವಿರುದ್ಧ

ಆರೋಪಿಗಳುಃ 1. ಹಂಸ, ತಂದೆಃ ಪೌತಿ ಅಲ್ವಿ, 52 ವರ್ಷ
ಮಟ್ಟ, ಬಾಡಗ ಬಾಣಂಗಾಲ ಗ್ರಾಮ,
ವಿರಾಜಪೇಟೆ ತಾಲ್ಲೂಕು, ಕೊಡಗು.

2. ಶಕೀರ್ ಪಿ.ಹೆಚ್, ತಂದೆಃ ಹಂಸ ಪಿ, 24 ವರ್ಷ
ಮಟ್ಟ, ಬಾಡಗ ಬಾಣಂಗಾಲ ಗ್ರಾಮ, ಕೊಡಗು.

3. ಆಸೀಸ್ ಕೆ.ಎಸ್, ತಂದೆಃಪೌತಿ ಸೈದು,
42 ವರ್ಷ,ಕಲ್ಲಾಳ, ಬೋಟೆಪಾಳಿ,
ಮಾಲ್ದಾರೆ ಗ್ರಾಮ, ವಿರಾಜಪೇಟೆ ತಾಲ್ಲೂಕು,
ಕೊಡಗು.

4. ನಜೀರ್, ತಂದೆಃಪೌತಿ ಮಹಮ್ಮದ್, 43 ವರ್ಷ,
ಮಟ್ಟ, ಬಾಡಗ ಬಾಣಂಗಾಲ ಗ್ರಾಮ,
ವಿರಾಜಪೇಟೆ ತಾಲ್ಲೂಕು.

5. ಬಶೀರ್ ಪಿ.ಎಂ, ತಂದೆಃಪೌತಿ ಮಹಮ್ಮದ್,
26 ವರ್ಷ, ಮಟ್ಟ ಬಾಡಗ ಬಾಣಂಗಾಲ ಗ್ರಾಮ,
ವಿರಾಜಪೇಟೆ ತಾಲ್ಲೂಕು, ಕೊಡಗು.

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರ.1 ಪಿರ್ಯಾದಿಯ ಪರ ಇದುವರೆಗೆ ನಡೆದ ಎಲ್ಲಾ ಸಾಕ್ಷ್ಯಗಳನ್ನು ಕೇಳಿರುವಿರಾ?

ಉತ್ತರಃ Yes.

ಪ್ರ.2. **ಫ್ರಾಸಾ–1 ಜೇವಿಯರ್ ಸಿ.ಕೆ** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಅವರು ಅವರ ಹಸುವನ್ನು ದಿನಲೂ ಮೇಯಲು ಬಿಟ್ಟು, ಅದು ಸಂಜೆ ಮನೆಗೆ ಬರುತ್ತವೆ. ಅದರಂತೆ 2021 ನೇ ಇಸವಿಯಲ್ಲಿ ಒಂದು ದಿನ ಎಂದಿನಂತೆ ಅವರ ಹಸುವನ್ನು ಮೇಯಲು ಬಿಟ್ಟಿದ್ದು, ಸದರಿ ಹಸುವು ಸಂಜೆ ಮನೆಗೆ ಬಂದಿರುವುದಿಲ್ಲ. ಮರುದಿನ ಬೆಳಿಗ್ಗೆ ಸುಮಾರು 8.30 ರಿಂದ 9.00 ಗಂಟೆ ಸುಮಾರಿಗೆ ಹುಡುಕಿಕೊಂಡು ಹೋದಾಗ ತೋಟದ ಒಳಗೆ ಹಸುವು ಸತ್ತು ಹೋಗಿ, ಅದರ ಚರ್ಮ ಹಾಗೂ ಬೋಟಿ ಇದ್ದಿರುತ್ತದೆ. ನಂತರ ಈ ಬಗ್ಗೆ ಅವರು ಪೋಲೀಸರಿಗೆ ದೂರನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.3. **ಫ್ರಾಸಾ–1** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಪೊಲೀಸರು ಸ್ಥಳಕ್ಕೆ ಬಂದು ಅವರ ಹಾಗೂ ಅವರ ಮಕ್ಕಳಾದ ಚಾಸಾ–2 ಹಾಗೂ 3 ಹಾಗೂ ಚಾಸಾ–4 ಹಾಗೂ 5 ರವರ ಸಮಕ್ಷಮ ಬರವಣಿಗೆ ಮಾಡಿರುತ್ತಾರೆ. ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.4. **ಫ್ರಾಸಾ–1** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಅವರು ದಿನಾಂಕ 12.05.2021 ರಂದು ಮೇಯಲು ಬಿಟ್ಟಿದ್ದ ಹಸುವು ಮನೆಗೆ ಬಂದಿರುವುದಿಲ್ಲ ಹಾಗೂ ಅದೇ ದಿನ ಸಂಜೆ ಅವರು ಹಾಗೂ ಅವರ ಮಕ್ಕಳಾದ ಚಾಸಾ–2 ಹಾಗೂ 3 ರವರು ಸದರಿ ಹಸುವನ್ನು ಹುಡುಕಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ಆ ದಿನ ಹಸುವು ಸಿಕ್ಕದೇ ಇದ್ದು, ಮರು ದಿನ ಅಂದರೆ ದಿನಾಂಕ 13.05.2021 ರಂದು ಅವರು ಹಾಗೂ ಅವರ ಮಕ್ಕಳಾದ ಚಾಸಾ–2 ಹಾಗೂ 3 ರವರು ಹಸುವನ್ನು ಹುಡುಕಿಕೊಂಡು ಹೋದಾಗ ಬಿಬಿಟಿಸಿ ಕಂಪೆನಿಯ ಚೌಡಿಕಾಡು ಎಸ್ಟೇಟ್‌ನ ಒಳಗೆ ರಕ್ತದ ಕಲೆಗಳು ಕಂಡು ಬಂದಿದ್ದು, ಅವರು ಹುಡುಕಿಕೊಂಡು ಮುಂದೆ ಹೋಗಿ ನೋಡಲಾಗಿ ಅಲ್ಲಿ ಸತ್ತ ದನದ ಚರ್ಮ ಹಾಗೂ

ಬೋಟಿ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿ. ನಂತರ ದಿನಾಂಕ 16.05.2021 ರಂದು ಅವರು ಪೊಲೀಸರಿಗೆ ಒಂದು ಮರು ಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.5. **ಫ್ರಾಸಾ-2 ಸಿ. ಸಬಾಸ್ಟಿನ್** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 12.05.2021 ರಂದು ಅವರ ಹಸುವನ್ನು ಮೇಯಲು ಗದ್ದೆಗೆ ಬಿಟ್ಟಿದ್ದು, ಮಾಮೂಲಾಗಿ ಅದು ಸಂಜೆ 5 ರಿಂದ 6 ಗಂಟೆ ಸಮಯದಲ್ಲಿ ಅದು ಮನೆಗೆ ಹಿಂತಿರುಗಿತ್ತಿದ್ದು, ಆದರೆ ಸದರಿ ದಿನದಂದು ಅದು ಬಾರದ ಕಾರಣ ಅವರು, ಅವರ ತಂದೆಯಾದ ಚಾಸಾ-1 ಹಾಗೂ ಅವರ ತಮ್ಮನಾದ ಚಾಸಾ-3 ರವರು ಅದನ್ನು ಹುಡುಕಿಕೊಂಡು ಹೋಗಿದ್ದು, ಆದರೆ ಸದರಿ ದಿನ ಅವರಿಗೆ ಹಸುವು ಸಿಕ್ಕಿರುವುದಿಲ್ಲ. ನಂತರ ಮರುದಿನ ಬೆಳಿಗ್ಗೆ ಅವರು, ಅವರ ತಂದೆಯಾದ ಚಾಸಾ-1 ಹಾಗೂ ಅವರ ತಮ್ಮನಾದ ಚಾಸಾ-3 ರವರು ಹಸುವನ್ನು ಹುಡುಕಿಕೊಂಡು ಪುನಃ ಅವರ ಮನೆಯ ಪಕ್ಕದಲ್ಲಿದ್ದ ಬಿಬಿಟಿಸಿ ಕಂಪೆನಿಗೆ ಸೇರಿದ ತೋಟದ ಹತ್ತಿರ ಹೋದಾಗ ಅಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.6. **ಫ್ರಾಸಾ-2** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಅವರು ಮುಂದೆ ಹೋಗಿ ನೋಡಲಾಗಿ, ಅಲ್ಲಿ ಅವರ ಹಸುವಿನ ಚರ್ಮ ಹಾಗೂ ಕರುಳು ಇರುವುದು ಕಂಡು ಬಂದಿರುತ್ತದೆ. ಸದರಿ ಹಸುವಿನ ಚರ್ಮವನ್ನು ನೋಡಿ ಅದು ಅವರ ಹಸುವೇ ಎಂದು ಖಾತರಿ ಮಾಡಿಕೊಂಡಿರುತ್ತಾರೆ. ನಂತರ ಅವರು ಪೊಲೀಸರಿಗೆ ದೂರನ್ನು ನೀಡಿದ್ದು, ನಂತರ ಅಲ್ಲಿ ಸಿಕ್ಕಿದ ಹಸುವಿನ ಚರ್ಮ ಹಾಗೂ ಕರುಳನ್ನು ಅಲ್ಲಿಯೇ ಹೂತು ಹಾಕಲಾಯಿತು. ನಂತರ ದಿನಾಂಕ

16.05.2021 ರಂದು ಪೊಲೀಸರು ಆರೋಪಿಗಳಾದ ನಿಮ್ಮನ್ನು ತೋರಿಸಿ, ನೀವುಗಳೇ ಅವರ ಹಸುವನ್ನು ಕೊಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಪೊಲೀಸರು ಅದೇ ದಿನ ಆರೋಪಿಗಳಾದ ನಿಮ್ಮಗಳ ಮನೆಗೆ ಬಂದು, ನೀವುಗಳು ಕೃತ್ಯಕ್ಕೆ ಬಳಸಿದ ಆಯುಧಗಳನ್ನು ಹಾಗೂ ಸಾಗಿಸಲು ಬಳಸಿದ ಬೊಲೆರೋ ಪಿಕಪ್ ವಾಹನವನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.7. **ಫ್ರಾಸಾ–3 ಸಿ ಎಕ್ಸ್ ಜಾರ್ಜ್** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಅವರು ದಿನಾಲೂ ಅವರ ಹಸುವನ್ನು ಮೇಯಲು ಬಿಡುತ್ತಿದ್ದು, ಅದರಂತೆ ದಿನಾಂಕ 12.05.2021 ರಂದು ಹಸುವನ್ನು ಮೇಯಲು ಗದ್ದೆಗೆ ಬಿಟ್ಟಿದ್ದು, ಮಾಮುಲಾಗಿ ಅದು ಸಂಜೆ 5 ರಿಂದ 6 ಗಂಟೆ ಸಮಯದಲ್ಲಿ ಅದು ಮನೆಗೆ ಹಿಂತಿರುಗುತ್ತಿದ್ದು, ಆದರೆ ಸದರಿ ದಿನದಂದು ಅದು ಬಂದಿರುವುದಿಲ್ಲ. ಆ ಕಾರಣ ಮರು ದಿನ ಬೆಳಿಗ್ಗೆ ಅವರು, ಅವರ ತಂದೆಯಾದ ಚಾಸಾ–1 ಹಾಗೂ ಅವರ ಅಣ್ಣನಾದ ಚಾಸಾ–2 ರವರು ಅದನ್ನು ಹುಡುಕಿಕೊಂಡು ಹೋಗಿದ್ದು, ಅವರ ಮನೆಯ ಪಕ್ಕದಲ್ಲಿದ್ದ ಬಿಬಿಟಿಸಿ ಕಂಪೆಸಿಗೆ ಸೇರಿದ ತೋಟದ ಹತ್ತಿರ ಹೋದಾಗ ಅಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.8. ಫ್ರಾಸಾ–3 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಅವರು ಮುಂದೆ ಹೋಗಿ ನೋಡಲಾಗಿ, ಅಲ್ಲಿ ಅವರ ಹಸುವಿನ ಚರ್ಮ ಹಾಗೂ ಕರುಳು ಇರುವುದು ಕಂಡು ಬಂದಿರುತ್ತದೆ. ನಂತರ ಅವರು ಪೊಲೀಸರಿಗೆ ದೂರನ್ನು ನೀಡಿದ್ದು, ನಂತರ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿ, ಅಲ್ಲಿ ಮಹಜರು ಕ್ರಮ ಜರುಗಿಸಿ, ನಂತರ ಅಲ್ಲಿ ಸಿಕ್ಕಿದ ಹಸುವಿನ ಚರ್ಮ ಹಾಗೂ ಕರುಳನ್ನು ಅಲ್ಲಿಯೇ

ಹೂತು ಹಾಕಲಾಯಿತು. ಪೊಲೀಸರು ಅವರ ಅಣ್ಣನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.9. **ಫ್ರಾಸಾ-4 ಕೆ.ಜಿ ಬೋಪಣ್ಣ** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 13.05.2021 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮಹಜರು ಕ್ರಮ ಜರುಗಿಸಿದ್ದು, ಆ ಸಮಯದಲ್ಲಿ ಅವರು ಇದ್ದಿರುತ್ತಾರೆ. ಆ ಸಮಯದಲ್ಲಿ ಅಲ್ಲಿ ಪಶುವೈಧ್ಯಾಧಿಕಾರಿಯವರು ಸಹ ಇದ್ದಿದ್ದರು. ಪೊಲೀಸರು ಅಲ್ಲಿ ಪರಿಶೀಲನೆ ಮಾಡಿ, ನಂತರ ಸತ್ತ ಹಸುವಿನ ಚರ್ಮ, ಬೋಟಿ ಹಾಗೂ ಇತ್ಯಾದಿಗಳನ್ನು ಅಲ್ಲಿಯೇ ಹೂತಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಫೋಟೋ ಸಹ ತೆಗೆದಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.10. **ಫ್ರಾಸಾ-5 ವಿ.ಸಿ ಸುರೇಶ್** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 16.05.2021 ರಂದು ಬಾಡಗ ಬಾಣಾಂಗಾಲದ ಚೌಡಿಕಾಡು ಎಸ್ಟೇಟ್ ಮಟ್ಟದಲ್ಲಿ ಪೊಲೀಸರು ಮಹಜರಿಗೆ ಬರುವಂತೆ ತಿಳಿಸಿದ್ದು, ಆ ಪ್ರಕಾರ ಅವರು ಹೋಗಿದ್ದು, ಅಲ್ಲಿ ಪೊಲೀಸರು ಕತ್ತಿ, ದನವನ್ನು ಕಡಿಯಲು ಬಳಸಿದ ಮರದ ಪೀಸು ಹಾಗೂ ತಾಟು ಇತ್ಯಾದಿಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಮಹಜರಿಗೆ ಸಹಿ ಮಾಡಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ.  ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.11. **ಫ್ರಾಸಾ-5** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 16.05.2021 ರಂದು 4 ನೇ ಆರೋಪಿಯಾದ ನೀವು ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ಮಟ್ಟ ಬಾಡಗ ಬಾಣಂಗಾಲ ಗ್ರಾಮದ ನೀವು ವಾಸವಿರುವ ಮನೆಯಲ್ಲಿಟ್ಟಿರುವುದಾಗಿ ತಿಳಿಸಿದ್ದು, ಪೊಲೀಸರು 4 ನೇ ಆರೋಪಿಯಾದ

ನಿಮ್ಮನ್ನು, ಅವರನ್ನು, ಚಾಸಾ-6 ರವರನ್ನು ಕರೆದುಕೊಂಡು ಹೋಗಿದ್ದು, ಅಲ್ಲಿ 4 ನೇ ಆರೋಪಿಯಾದ ನೀವು ಕೃತ್ಯಕ್ಕೆ ಬಳಸಿದ ಕೆಎ-13 ಎಂಹೆಚ್ -035 ನೋಂದಣಿ ಸಂಖ್ಯೆಯ ಬಿಳಿ ಬಣ್ಣದ ಸ್ಕೂಟರ್, ಒಂದು ಬಿಳಿ ಬಣ್ಣದ ದೊಡ್ಡ ಪ್ಲಾಸ್ಟಿಕ್ ತಾಟಾ, ಒಂದು ಉದ್ದನೆಯ ಹಗ್ಗ, ಎರಡು ಮರದ ಹಿಡಿಗಳಿರುವ ಕಬ್ಬಿಣದ ಕತ್ತಿಗಳು, ಎರಡು ಚೂರಿಗಳು, ಒಂದು ಸಣ್ಣದಾದ ಚಾಕು, ಒಂದು ವೃತ್ತಾಕಾರದ ಮರದ ದಿಮ್ಮಿ, ಎರಡು ಚಾರ್ಜಬಲ್ ಲೈಟ್ ಗಳು, ಒಂದು ವಿದ್ಯುದ್ಮಾನ ತೂಕದ ಯಂತ್ರ ಹಾಗೂ ಎರಡು ಬಿಳಿ ಬಣ್ಣದ ಗೊಬ್ಬರದ ಚೀಲಗಳನ್ನು ಹಾಜರು ಪಡಿಸಿದ್ದು, ಪೊಲೀಸರು ಅವರ ಹಾಗೂ ಚಾಸಾ-6 ರವರ ಸಮಕ್ಷಮ ಮಹಜರು ಕ್ರಮ ಜರುಗಿಸಿ ಅವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.12. **ಪ್ರಾಸಾ-6 ಜೋಸೆಫ್** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 13.05.2021 ರಂದು ಅವರು ಬಾಡಗ ಬಾಣಾಂಗಾಲ ಗ್ರಾಮದ ಬಿಬಿಟಿಸಿಎಲ್ ಕಂಪೆನಿಯ ತೋಟದ ಕೆಲಸದ ವಿಚಾರ ಮಾತನಾಡಲು ಹೋಗಿದ್ದು, ಅಲ್ಲಿ ಪೊಲೀಸರು ಈ ಪ್ರಕರಣದ ವಿಚಾರವನ್ನು ತಿಳಿಸಿದ್ದು, ಅವರು ಅದಕ್ಕೆ ಒಪ್ಪಿಕೊಂಡು ಪೊಲೀಸರು ಕರೆದುಕೊಂಡು ಹೋದ ಕೃತ್ಯ ಸ್ಥಳಕ್ಕೆ ಹೋಗಿದ್ದು, ಅಲ್ಲಿ ಪೊಲೀಸರು ಅವರ ಹಾಗೂ ಚಾಸಾ-4 ರವರ ಸಮಕ್ಷಮ ಮಹಜರು ಬರೆದು ಸತ್ತ ದನದ ಬೋಟಿ, ಚರ್ಮವನ್ನು ಅಮಾನತ್ತು ಪಡಿಸಿಕೊಂಡು ನಂತರ ಅದನ್ನು ಗುಂಡಿ ತೆಗೆದು ಹೂತಿರುತ್ತಾರೆ. ಸದರಿ ಮಹಜರಿಗೆ ಅವರು ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.13. **ಫ್ರಾಸಾ–7 ಪಿ.ಆರ್ ಲವಕುಮಾರ್** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 16.05.2021 ರಂದು ಅವರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ–16 ರವರ ಆದೇಶದ ಮೇರೆಗೆ ಅವರು, ಚಾಸಾ–8, 10 ಹಾಗೂ ಚಾಸಾ–11 ರವರು ಆರೋಪಿಗಳಾದ ನಿಮ್ಮನ್ನು ಪತ್ತೆ ಹಚ್ಚುವ ಸಲುವಾಗಿ ಬೆಳಿಗ್ಗೆ ಸುಮಾರು 11.00 ಗಂಟೆಗೆ ಸಿದ್ಧಾಪುರದ ಬಾಡಗ ಬಾಣಾಂಗಾಲ ಗ್ರಾಮಕ್ಕೆ ಹೋಗಿದ್ದು, ಅಲ್ಲಿನ ಸಾರ್ವಜನಿಕ ಬಸ್ ನಿಲ್ದಾಣದ ಬಳಿ 1 ರಿಂದ 4 ನೇ ಆರೋಪಿಗಳಾದ ನೀವುಗಳು ಇದ್ದಿರುವುದು ಕಂಡು ಬಂದಿದ್ದು, ಆರೋಪಿಗಳಾದ ನಿಮ್ಮನ್ನು ಹಿಡಿದುಕೊಂಡು ತಂದು ಠಾಣೆಗೆ ಚಾಸಾ–16 ರವರ ಮುಂದೆ ಹಾಜರುಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.14. **ಫ್ರಾಸಾ–7** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಚಾಸಾ–16 ರವರು ಸದರಿ 1 ರಿಂದ 4 ನೇ ಆರೋಪಿಗಳಾದ ನಿಮ್ಮನ್ನು ವಿಚಾರಿಸಿ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಅವರುಗಳು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯ ಸ್ಥಳವನ್ನು ತೋರಿಸಿಕೊಡುವುದಾಗಿ ತಿಳಿಸಿದ್ದು, ಆ ಮೇರೆಗೆ ಚಾಸಾ–16 ರವರು 1 ರಿಂದ 4 ನೇ ಆರೋಪಿಗಳಾದ ನಿಮ್ಮಗಳ ಬೆಂಗಾಲಾಗಿ ಚಾಸಾ–8, 11 ಹಾಗೂ 15 ರವರನ್ನು ಕರೆದುಕೊಂಡು 1 ರಿಂದ 4 ನೇ ಆರೋಪಿಗಳೊಂದಿಗೆ ಕೃತ್ಯ ಸ್ಥಳಕ್ಕೆ ಹೋಗಿದ್ದು, ಅಲ್ಲಿಗೆ ಚಾಸಾ–16 ರವರು ಪಂಚರಾದ ಚಾಸಾ–6 ಹಾಗೂ 7 ರವರನ್ನು ಬರಮಾಡಿಕೊಂಡು ನಂತರ 1 ರಿಂದ 4 ನೇ ಆರೋಪಿಗಳು ತೋರಿಸಿ ಕೊಟ್ಟ ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿರುತ್ತಾರೆ. ಸದರಿ ಮಹಜರನ್ನು ಮಧ್ಯಾಹ್ನ 1.45 ರಿಂದ 2.30 ಗಂಟೆಯವರೆಗೆ ಜರುಗಿಸಲಾಯಿತು. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತಾರೆ. ಸದರಿ ಮಹಜರಿಗೆ ಅವರು ಸಹಿ ಮಾಡಿರುತ್ತಾರೆ. ನಂತರ ಅವರು 1 ಹಾಗೂ 2 ನೇ ಆರೋಪಿಗಳಾದ ನಿಮ್ಮನ್ನು ಠಾಣೆಗೆ ಕರೆ ತಂದಿರುತ್ತಾರೆ. ಅವರು ಈ ಎಲ್ಲಾ

ಸಂಗತಿಗಳ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.15. **ಫ್ರಾಸಾ–8 ಮಲ್ಲಪ್ಪ ಮುಶಿಗೇರಿ** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 16.05.2021 ರಂದು ಅವರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಚಾಸಾ–16 ರವರ ಆದೇಶದ ಮೇರೆಗೆ ಅವರು, ಚಾಸಾ–8, 9 ಹಾಗೂ 10 ರವರು ಆರೋಪಿಗಳಾದ ನಿಮ್ಮನ್ನು ಪತ್ತೆ ಹಚ್ಚುವ ಸಲುವಾಗಿ ಬೆಳಿಗ್ಗೆ 8.00 ಗಂಟೆಗೆ ಠಾಣೆಯಿಂದ ಹೊರಟು ಸುಮಾರು 11.00 ಗಂಟೆಗೆ ಸಿದ್ದಾಪುರದ ಬಾಡಗ ಬಾಣಾಂಗಾಲ ಗ್ರಾಮಕ್ಕೆ ಹೋಗಿದ್ದು, ಅಲ್ಲಿನ ಸಾರ್ವಜನಿಕ ಬಸ್ ನಿಲ್ದಾಣದ ಬಳಿ 1 ರಿಂದ 4 ನೇ ಆರೋಪಿಗಳು ಇದ್ದಿರುವುದು ಕಂಡು ಬಂದಿದು, ಅವರನ್ನು ಹಿಡಿದುಕೊಂಡು ತಂದು ಠಾಣೆಗೆ ಚಾಸಾ–16 ರವರ ಮುಂದೆ ಹಾಜರು ಪಡಿಸಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.16. **ಫ್ರಾಸಾ–8** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಚಾಸಾ–16 ರವರು ಸದರಿ 1 ರಿಂದ 4 ನೇ ಆರೋಪಿಗಳಾದ ನಿಮ್ಮಗಳನ್ನು ವಿಚಾರಿಸಿ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಆರೋಪಿಗಳಾದ ನೀವುಗಳು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯವನ್ನು ಒಪ್ಪಿಕೊಂಡು ಕೃತ್ಯ ಸ್ಥಳವನ್ನು ಹಾಗೂ ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳನ್ನು ತೋರಿಸಿ ಕೊಡುವುದಾಗಿ ತಿಳಿಸಿದ್ದು, ಆ ಮೇರೆಗೆ ಚಾಸಾ–16 ರವರು 1 ರಿಂದ 4 ನೇ ಆರೋಪಿಗಾದ ನಿಮ್ಮಗಳ ಬೆಂಗಾಲಾಗಿ ಚಾಸಾ–8, 9, 10 ಹಾಗೂ 15 ರವರನ್ನು ಕರೆದುಕೊಂಡು 1 ರಿಂದ 4 ನೇ ಆರೋಪಿಗಳಾದ ನಿಮ್ಮಗಳೊಂದಿಗೆ ಕೃತ್ಯ ಸ್ಥಳಕ್ಕೆ ಹೋಗಿದ್ದು, ಅಲ್ಲಿಗೆ ಚಾಸಾ–16 ರವರು ಪಂಚರಾದ ಚಾಸಾ–6 ಹಾಗೂ 7 ರವರನ್ನು ಬರಮಾಡಿಕೊಂಡು ನಂತರ 1 ರಿಂದ 4 ನೇ ಆರೋಪಿಗಳಾದ ನೀವುಗಳು

ತೋರಿಸಿಕೊಟ್ಟ ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿರುತ್ತಾರೆ. ಸದರಿ ಮಹಜರನ್ನು ಮಧ್ಯಾಹ್ನ 01.45 ರಿಂದ 2.30 ಗಂಟೆಯವರೆಗೆ ಜರುಗಿಸಲಾಯಿತು. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತಾರೆ. ಸದರಿ ಮಹಜರನ್ನು ಚಾಸಾ–16 ರವರ ಉಕ್ತಲೇಖನದ ಮೇರೆಗೆ ಅವರು ಬರೆದು ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.17. **ಫ್ರಾಸಾ–8** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಪ್ರಕರಣದ 4 ನೇ ಆರೋಪಿಯಾದ ನಾಸೀರ್ ಕೃತ್ಯಕ್ಕೆ ಬಳಸಿದ ಸ್ವತ್ತುಗಳನ್ನು ಹಾಗೂ ವಾಹನವನ್ನು ಬಾಡಿಗೆಗೆ ಇದ್ದ ಮಟ್ಟ ಬಾಡಗ ಬಾಣಾಂಗಾಲದಲ್ಲಿರುವ ತೆರೆಸಾ ಎಂಬುವರ ಮನೆಯಲ್ಲಿ ಇರುವುದಾಗಿ ತಿಳಿಸಿದ ಮೇರೆಗೆ ಚಾಸಾ–16 ರವರು ಅವರನ್ನು, ಚಾಸಾ–10 ಹಾಗೂ 15 ರವರನ್ನು ಪಂಚರಾದ ಚಾಸಾ–6 ಹಾಗೂ 7 ರವರನ್ನು 4 ನೇ ಆರೋಪಿಯಾದ ನಿಮ್ಮ ಜೊತೆ ನಿಮ್ಮ ಬಾಡಿಗೆ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 4 ನೇ ಆರೋಪಿಯಾದ ನೀವು ಕೃತ್ಯಕ್ಕೆ ಬಳಸಿದ ಒಂದು ಪ್ಲಾಸ್ಟಿಕ್ ಥಾಟ್, ಉದ್ದನೆಯ ಹಗ್ಗ, ಎರಡು ಮರದ ಹಿಡಿಯಿರುವ ಕಬ್ಬಿಣದ ಕತ್ತಿಗಳು, ಎರಡು ಚೂರಿಗಳು , ಒಂದು ಚಿಕ್ಕ ಚಾಕು, ಒಂದು ವೃತ್ತಾಕಾರದ ಮರದ ದಿಮ್ಮಿ, ಎರಡು ಜಾರ್ಜಬಲ್ ಟಾರ್ಚ್ ಗಳು, ಒಂದು ವಿದ್ಯುದ್ಮಾನ ತೂಕದ ಯಂತ್ರ, ಎರಡು ಪ್ಲಾಸ್ಟಿಕ್ ಚೀಲಗಳು ಹಾಗೂ ಕೃತ್ಯಕ್ಕೆ ಬಳಸಿದ ಕೆಎ–30 ಎಂ–4035 ನೋಂದಣಿ ಸಂಖ್ಯೆಯ ಮಹೇಂದ್ರ ಪಿಕಪ್ ಮತ್ತು 5 ನೇ ಆರೋಪಿಗೆ ಸೇರಿದ ಕೆಎ–14 ವೈ 1200 ನೋಂದಣಿ ಸಂಖ್ಯೆಯ ಟಿವಿಎಸ್ ಸ್ಕೂಟರ್ ನ್ನು ತೋರಿಸಿಕೊಟ್ಟಿದ್ದು, ಅದನ್ನು ಚಾಸಾ–16 ರವರು ಚಾಸಾ–6 ಹಾಗೂ 7 ರವರ ಸಮಕ್ಷಮ ಮಹಜರು ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಜರುಗಿಸಲಾಯಿತು. ಸದರಿ ಮಹಜರನ್ನು ಚಾಸಾ–16 ರವರ ಉಕ್ತಲೇಖನದ

ಮೇರೆಗೆ ಅವರು ಬರೆದು ಸಹಿ ಮಾಡಿರುತ್ತಾರೆ. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.18. **ಫ್ರಾಸಾ–9 ಶಿವಕುಮಾರ್ ಪಿ** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ದಿನಾಂಕ 16.05.2021 ರಂದು ಅವರು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ–16 ರವರು ಈ ಪ್ರಕರಣದ ಆರೋಪಿಗಳಾದ ನಿಮ್ಮನ್ನು ಪತ್ತೆ ಹಚ್ಚಿ ಹಾಜರು ಪಡಿಸುವಂತೆ ಮೌಖಿಕ ಆದೇಶ ಮಾಡಿದ್ದು, ಆ ಪ್ರಕಾರ ಅವರು, ಚಾಸಾ–7 ರಿಂದ 9 ಹಾಗೂ 11 ರವರೊಂದಿಗೆ ಆರೋಪಿಗಳಾದ ನಿಮ್ಮನ್ನು ಪತ್ತೆ ಹಚ್ಚುವ ಸಲುವಾಗಿ ಮಟ್ಟ ಗ್ರಾಮದ ಬಸ್ ನಿಲ್ದಾಣದ ಬಳಿ ತೆರಳಿದಾಗ 1 ರಿಂದ 4 ನೇ ಆರೋಪಿಗಳಾದ ನೀವುಗಳು ಅಲ್ಲಿ ಇದ್ದಿದ್ದು, ನೀವುಗಳನ್ನು ವಶಕ್ಕೆ ಪಡೆದು ಠಾಣೆಗೆ ಹಿಂತಿರುಗಿ ಆರೋಪಿಗಳಾದ ನಿಮ್ಮನ್ನು ಚಾಸಾ–16 ರವರ ಮುಂದೆ ಹಾಜರು ಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.19. **ಫ್ರಾಸಾ–9** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಅದೇ ದಿನ ಮಧ್ಯಾಹ್ನ ಚಾಸಾ–16 ರವರು ಅವರನ್ನು ಹಾಗೂ 1 ರಿಂದ 4 ನೇ ಆರೋಪಿಗಳಾದ ನೀವುಗಳನ್ನು, ನೀವುಗಳು ತಿಳಿಸಿದ ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಚಾಸಾ–16 ರವರು ಆರೋಪಿಗಳಾದ ನೀವುಗಳು ತೋರಿಸಿಕೊಟ್ಟ ಕೃತ್ಯ ಸ್ಥಳದಲ್ಲಿ ಮಧ್ಯಾಹ್ನ 1.45 ರಿಂದ 2.30 ರವರೆಗೆ ಕೃತ್ಯ ಸ್ಥಳದ ಮಹಜರು ಕ್ರಮ ಜರುಗಿಸಿರುತ್ತಾರೆ. ಆ ಸಮಯದಲ್ಲಿ ಅವರು ಫೋಟೋ ಸಹ ತೆಗೆದಿರುತ್ತಾರೆ. ಸದರಿ ಮಹಜರಿಗೆ ಅವರು ಸಹ ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.20. **ಫ್ರಾಸಾ–9** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ 4 ನೇ ಆರೋಪಿಯಾದ ನಿಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯಕ್ಕೆ ಬಳಸಿದ ಸ್ವತ್ತುಗಳಿರುವ ಜಾಗವನ್ನು ತೋರಿಸುವುದಾಗಿ ತಿಳಿಸಿದ್ದು, ಆ ಪ್ರಕಾರ ತನಿಖಾಧಿಕಾರಿಯವರಾದ ಚಾಸಾ–16 ರವರು ಅವರನ್ನು ಹಾಗೂ 4 ನೇ ಆರೋಪಿಯಾದ ನಿಮ್ಮನ್ನು, ಆರೋಪಿಯಾದ ನೀವು ತಿಳಿಸಿದ ಕೃತ್ಯಕ್ಕೆ ಬಳಸಿದ ಸ್ವತ್ತುಗಳು ಇಟ್ಟಿರುವ ಸ್ಥಳವಾದ ಮಟ್ಟ ಗ್ರಾಮದ ತೆರೆಸಾ ಎನ್ನುವವರಿಗೆ ಸೇರಿದ 5 ನೇ ಆರೋಪಿಯಾದ ನೀವು ಬಾಡಿಗೆಗೆ ಇದ್ದ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 4 ನೇ ಆರೋಪಿಯಾದ ನೀವು ತನಿಖಾಧಿಕಾರಿಯವರ ಮುಂದೆ ಕೃತ್ಯಕ್ಕೆ ಬಳಸಿದ ವಸ್ತುಗಳಾದ ಎರಡು ಚಾಕು, ಮರದ ದಿಮ್ಮಿ, ಎರಡು ಚೂರಿ, ಒಂದು ಪ್ಲಾಸ್ಟಿಕ್ ಥಾಟು, ಎರಡು ಟಾರ್ಚ್ ಲೈಟ್, ಹಗ್ಗ, ಎರಡು ಕತ್ತಿ, ತೂಕದ ಯಂತ್ರ ಹಾಗೂ ಎರಡು ಪ್ಲಾಸ್ಟಿಕ್ ಚೀಲಗಳನ್ನು ಹಾಗೂ ಟಿವಿಎಸ್ ಬೈಕ್, ಪಿಕಪ್ ಜೀಪ್ ಗಳನ್ನು ತೋರಿಸಿಕೊಟ್ಟಿದ್ದು, ಚಾಸಾ–16 ರವರು ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ ಮಹಜರು ಕ್ರಮ ಜರುಗಿಸಿ ಅವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಅವರು ಫೋಟೋ ತೆಗೆದಿರುತ್ತಾರೆ. ಸದರಿ ಮಹಜರಿಗೆ ಅವರು ಸಹ ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.21. **ಫ್ರಾಸಾ–9** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ 3 ನೇ ಆರೋಪಿಯಾದ ನೀವು ನಿಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯಕ್ಕೆ ಬಳಸಿರುವ ರಾಯಲ್ ಎನ್ ಫೀಲ್ಡ್ ಬೈಕ್ ಇರುವ ಹಾಗೂ ಕೃತ್ಯದ ದನದ ಮಾಂಸವನ್ನು ಮಾರಾಟ ಮಾಡಿ ಬಂದ ಹಣ ಇರುವ ಜಾಗವನ್ನು ತೋರಿಸುವುದಾಗಿ ತಿಳಿಸಿದ್ದು, ಆ ಪ್ರಕಾರ ತನಿಖಾಧಿಕಾರಿಯವರಾದ ಚಾಸಾ–16 ರವರು ಅವರನ್ನು ಹಾಗೂ 3 ನೇ ಆರೋಪಿಯಾದ ನಿಮ್ಮನ್ನು, ನೀವು ತಿಳಿಸಿದ ಕೃತ್ಯಕ್ಕೆ ಬಳಸಿದ ಕೃತ್ಯಕ್ಕೆ ಬಳಸಿರುವ ರಾಯಲ್ ಎನ್ ಫೀಲ್ಡ್ ಬೈಕ್ ಇರುವ ಹಾಗೂ ಕೃತ್ಯದ ದನದ

ಮಾಂಸವನ್ನು ಮಾರಾಟ ಮಾಡಿ ಬಂದ ಹಣ ಇರುವ ಸ್ಥಳವಾದ ಮಾಲ್ದಾರೆ ಗ್ರಾಮದ ಕಲ್ಲಳ್ಳ ಚೋಟೆಪಾಳ್ಯ 3 ನೇ ಆರೋಪಿಯಾದ ನಿಮ್ಮ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 3 ನೇ ಆರೋಪಿಯಾದ ನೀವು ತನಿಖಾಧಿಕಾರಿಯವರ ಮುಂದೆ ಕೃತ್ಯಕ್ಕೆ ಬಳಸಿದ ರಾಯಲ್ ಎನ್ ಫೀಲ್ಡ್ ಬೈಕ್ ಹಾಗೂ ಕೃತ್ಯದ ದನದ ಮಾಂಸವನ್ನು ಮಾರಾಟ ಮಾಡಿ ಬಂದ ಹಣವಾದ ನಗದು ರೂ.20,000/-ಗಳನ್ನು ಹಾಜರು ಪಡಿಸಿದ್ದು, ಚಾಸಾ-16 ರವರು ಸಂಜೆ 04.45 ರಿಂದ 05.45 ಗಂಟೆಯವರೆಗೆ ಮಹಜರು ಕ್ರಮ ಜರುಗಿಸಿ ಅವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಅವರು ಫೋಟೋ ಹಾಗೂ ವೀಡಿಯೋ ತೆಗೆದಿರುತ್ತಾರೆ. ಸದರಿ ಮಹಜರಿಗೆ ಅವರು ಸಹ ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.22. ಪ್ರಾಸಾ-9 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಆ ರೀತಿ ಮಹಜರು ಸಮಯದಲ್ಲಿ ತೆಗೆದ ಫೋಟೋಗಳನ್ನು ಹಾಗೂ ವೀಡಿಯೋವನ್ನು ಠಾಣೆಯ ಕಂಪ್ಯೂಟರ್ ನಲ್ಲಿ ಕಂಪ್ಯೂಟರ್ ಗೆ ಡೌನ್ ಲೋಡ್ ಮಾಡಿಸಿ, ಪ್ರಿಂಟ್ ಔಟ್ ಮೂಲಕ ಪ್ರಿಂಟ್ ನ್ನು ತೆಗೆದು, ಸಿಡಿಗೆ ಕಾಪಿ ಮಾಡಿಸಿ ಸದರಿ ಸಿಡಿ ಮತ್ತು ಫೋಟೋವನ್ನು ಚಾಸಾ-16 ರವರ ಮುಂದೆ ಹಾಜರು ಪಡಿಸಿರುತ್ತಾರೆ. ಈ ಬಗ್ಗೆ ಅವರು ಭಾರತ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ಪ್ರಕಾರ ನೀಡಿದ ಪ್ರಮಾಣ ಪತ್ರ ಎಂದು ಗುರುತಿಸಿ, ಈ ಎಲ್ಲಾ ಸಂಗತಿಗಳ ಬಗ್ಗೆ ಅವರು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.23. **ಪ್ರಾಸಾ-10 ವಸಂತ್ ಕುಮಾರ್ ಹೆಚ್.ಕೆ** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ:16.05.2021 ರಂದು ಮಧ್ಯಾಹ್ನ ಸುಮಾರು 3.30

ಗಂಟೆಗೆ ತನಿಖಾಧಿಕಾರಿಯಾದ ಚಾಸಾ–16 ರವರು ಅವರಿಗೆ ಕೃತ್ಯ ಸ್ಥಳಕ್ಕೆ ಬರುವಂತೆ ತಿಳಿಸಿದ್ದು, ಆ ಪ್ರಕಾರ ಸಂಜೆ ಸುಮಾರು 4.00 ಗಂಟೆಗೆ ಕೃತ್ಯ ಸ್ಥಳಕ್ಕೆ ಹೋಗಿದ್ದು, ಅಲ್ಲಿ ತನಿಖಾಧಿಕಾರಿಯವರು ಕೃತ್ಯ ಸ್ಥಳ ಮಹಜರು ಕ್ರಮ ಜರುಗಿಸಿದ್ದು, ವಿಚಾರಣೆಯ ಸಮಯದಲ್ಲಿ 3 ನೇ ಆರೋಪಿಯಾದ ನೀವು ಕೃತ್ಯಕ್ಕೆ ಬಳಸಿದ ಬೈಕ್ ಹಾಗೂ ಮಾಂಸ ಮಾರಾಟ ಮಾಡಿ ಬಂದ ಹಣ ಅವರ ಮನೆಯಲ್ಲಿರುವುದಾಗಿ ತಿಳಿಸಿದ್ದು, 3 ನೇ ಆರೋಪಿಯಾದ ನಿಮ್ಮ ಸ್ವಇಚ್ಛಾ ಹೇಳಿಕೆಯ ಆಧಾರದ ಮೇರೆಗೆ ತನಿಖಾಧಿಕಾರಿಯವರು ಅವರನ್ನು ಹಾಗೂ ಚಾಸಾ–3 ಹಾಗೂ 4 ನೇ ಆರೋಪಿಗಳನ್ನು 3 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 3 ನೇ ಆರೋಪಿಯು ಅವರು ಕೃತ್ಯಕ್ಕೆ ಬಳಸಿದ ಕೆಎ–12 ಕ್ಯೂ–1704 ನೋಂದಣಿ ಸಂಖ್ಯೆಯ ರಾಯಲ್ ಎನ್ ಫೀಲ್ಡ್ ಬೈಕನ್ನು ಹಾಗೂ ಮಾಂಸವನ್ನು ಮಾರಾಟ ಮಾಡಿ ಬಂದ ಐನೂರು ಮುಖ ಬೆಲೆಯ ನಲವತ್ತು ನೋಟುಗಳನ್ನು ಅಂದರೆ ಒಟ್ಟು ರೂ.20,000/– ಗಳನ್ನು ತನಿಖಾಧಿಕಾರಿಯವರ ಮುಂದೆ ಹಾಜರು ಪಡಿಸಿದ್ದು, ತನಿಖಾಧಿಕಾರಿಯವರು ಮಹಜರು ಕ್ರಮ ಜರುಗಿಸಿ ಸದರಿ ಬೈಕ್ ಹಾಗೂ ನಗದು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು ಸಂಜೆ 4.45 ರಿಂದ 5.45 ಗಂಟೆಯವರೆಗೆ ಜರುಗಿಸಲಾಗಿದ್ದು, ಸದರಿ ಮಹಜರನ್ನು ತನಿಖಾಧಿಕಾರಿಯಾದ ಚಾಸಾ–16 ರವರ ಉಕ್ತಲೇಖನದ ಮೇರೆಗೆ ಅವರು ಬರೆದು ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.24. **ಪ್ರಾಸಾ–11 ಡಾಃ ಎ.ಬಿ ತಮ್ಮಯ್ಯ** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 13.05.2021 ರಂದು ಸಿದ್ದಾಪುರ ಪೊಲೀಸರ ಕೋರಿಕೆಯ ಮೇರೆಗೆ ಬಾಡಗ ಬಾಣಾಂಗಾಲ ಗ್ರಾಮದ ಬಿಬಿಟಿಸಿ ಕಾಫಿ ತೋಟದ ಕಾಲು ರಸ್ತೆಯ ಬಳಿ ಇದ್ದಿದ್ದ, ಒಂದು ಪ್ರಾಣಿಯ ಭಾಗಗಳನ್ನು ಪರೀಕ್ಷಿಸಿದ್ದು, ಆ ರೀತಿ ಪರೀಕ್ಷಿಸಿದಾಗ ಒಂದು ಹಸುವಿನ ಭಾಗಗಳೆಂದು ಕಂಡು ಬಂದಿದ್ದು, ಆ ಬಗ್ಗೆ ಪರೀಕ್ಷಿಸಿ ದಿನಾಂಕ

14.05.2021 ರಂದು ಈ ಬಗ್ಗೆ ದೃಢೀಕರಣ ಪತ್ರ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.25. **ಫ್ರಾಸಾ–13 ರಮೇಶ ಕೆ.ಪಿ** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 13.05.2021 ರಂದು ಸಂಜೆ 4.30 ಗಂಟೆಗೆ ಅವರು ಠಾಣಾ ಉಸ್ತುವಾರಿಯಲ್ಲಿದ್ದಾಗ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ಪುಕಾರನ್ನು ಹೊಂದಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 44/2021 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದನ್ನು ನ್ಯಾಯಾಲಯಕ್ಕೆ ಹಾಗೂ ಅವರ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತಾರೆ. ನಂತರ ಅದೇ ದಿನ ತನಿಖೆಯನ್ನು ಮುಂದುವರೆಸಿ ಪಿರ್ಯಾದುದಾರರಾದ ಚಾಸಾ–1 ರವರ ಜೊತೆ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದು, ಅಲ್ಲಿಗೆ ಪಂಚಾಯಿತಿದಾರರಾದ ಚಾಸಾ–4 ಹಾಗೂ 5 ರವರನ್ನು ಬರಮಾಡಿಕೊಂಡು, ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ಮಹಜರಿನ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು, ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.26. **ಫ್ರಾಸಾ–13** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಚಾಸಾ–1 ರವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟು, ಆರೋಪಿಗಳು ಕೃತ್ಯ ಎಸೆಗಿದ ಸತ್ತ ಹಸುವಿನ ಚರ್ಮ, ಸತ್ತ ಹಸುವಿನ ಸಣ್ಣ ಕರಳು ಹಾಗೂ ದೊಡ್ಡ ಕರುಳುಗಳಿಂದ ಕೂಡಿದ ಬೋಟಿಯನ್ನು ತೋರಿಸಿಕೊಟ್ಟ ಮೇರೆಗೆ ಚಾಸಾ–1, 4 ಹಾಗೂ 5 ರವರ ಸಮಕ್ಷಮ ಮಹಜರು ಕ್ರಮ ಜರುಗಿಸಿ, ಸದರಿ ಸತ್ತ ಹಸುವಿನ ಚರ್ಮ, ಸತ್ತ ಹಸುವಿನ ಸಣ್ಣ ಕರಳು ಹಾಗೂ ದೊಡ್ಡ ಕರುಳುಗಳಿಂದ ಕೂಡಿದ

ಬೋಟಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.27. **ಫಿರ್ಯಾಸಾ-13** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಠಾಣೆಗೆ ಹಿಂತಿರುಗಿ ಅಮಾನತ್ತು ಪಡಿಸಿಕೊಂಡ ಸ್ವತ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 48/2021 ರಂತೆ ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ. ನಂತರ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ನಿಪಿ-2 ರಲ್ಲಿ ಅಮಾನತ್ತು ಪಡಿಸಿಕೊಂಡ ಸತ್ತ ಹಸುವಿನ ಚರ್ಮ, ಸತ್ತ ಹಸುವಿನ ಸಣ್ಣ ಕರಳು ಹಾಗೂ ದೊಡ್ಡ ಕರುಳುಗಳಿಂದ ಕೂಡಿದ ಬೋಟಿಯನ್ನು ಗುಂಡಿಯನ್ನು ತೆಗೆದು ಅದರಲ್ಲಿ ಹಾಕಿ, ನಾಶಪಡಿಸಿರುತ್ತಾರೆ. ನಂತರ ಅದೇ ದಿನ ಮಹಜರಿನ ಸಾಕ್ಷಿದಾರರಾದ ಚಾಸಾ-4 ಹಾಗೂ 5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ. ನಂತರ ಮುಂದಿನ ತನಿಖೆಗಾಗಿ ಪ್ರಕರಣವನ್ನು ಚಾಸಾ-16 ರವರಿಗೆ ಹಸ್ತಾಂತರಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.28. **ಫಿರ್ಯಾಸಾ-13** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ದಿನಾಂಕ 16.05.2021 ರಂದು ತನಿಖಾಧಿಕಾರಿಗಳಾದ ಚಾಸಾ-16 ರವರು ಆರೋಪಿಗಳು ತೋರಿಸಿಕೊಟ್ಟ ಸ್ಥಳದಲ್ಲಿ ಮೂರು ಮಹಜರು ಕ್ರಮ ಜರುಗಿಸಲು ಅವರನ್ನು ಆರೋಪಿಗಳಾದ ನಿಮ್ಮಗಳ ಬೆಂಗಾವಲಿಗಾಗಿ ಕರೆದುಕೊಂಡು ಹೋಗಿದ್ದು, ಆ ಪ್ರಕಾರ ಅವರು 1 ರಿಂದ 4 ನೇ ಆರೋಪಿಗಳಾದ ನಿಮ್ಮನ್ನು ತನಿಖಾಧಿಕಾರಿಯವರ ಜೊತೆ ಬೆಂಗಾವಲಿನಲ್ಲಿ ಹೋಗಿ, ಅಲ್ಲಿ ಸದರಿ ಆರೋಪಿಗಳಾದ ನೀವುಗಳು ತೋರಿಸಿಕೊಟ್ಟ ಜಾಗದಲ್ಲಿ ತನಿಖಾಧಿಕಾರಿಯವರು

ಜರುಗಿಸಿದ ಮಹಜರುಗಳಿಗೆ ಅವರು ಸಹ ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.29. **ಫ್ರಾಸಾ–14 ಮೋಹನ್ ರಾಜ್.ಪಿ** ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿನಾಂಕ 16.05.2021 ರಂದು ಈ ಪ್ರಕರಣದ ಕಡತವನ್ನು ಚಾಸಾ–15 ರವರಿಂದ ಹೊಂದಿಕೊಂಡು ತನಿಖೆಯನ್ನು ಮುಂದುವರೆಸಿರುತ್ತಾರೆ. ಅದೇ ದಿನ ಆರೋಪಿ ಪತ್ತೆ ಬಗ್ಗೆ ಚಾಸಾ–8 ರಿಂದ 11 ರವರನ್ನು ನೇಮಿಸಿರುತ್ತಾರೆ. ನಂತರ ಚಾಸಾ–8 ರಿಂದ 11 ರವರು ನಾಲ್ಕು ಆರೋಪಿಗಳಾದ ನಿಮ್ಮನ್ನು ಬಾಡಗ ಬಾಣಾಂಗಾಲ ಬಸ್ ನಿಲ್ದಾಣದ ಬಳಿಯಿಂದ ವಶಕ್ಕೆ ಪಡೆದುಕೊಂಡು, ಸಮಯ ಬೆಳಿಗ್ಗೆ 11.30 ಕ್ಕೆ ಅವರ ಮುಂದೆ ಹಾಜರುಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.30. ಫ್ರಾಸಾ–14 ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ನಾಲ್ಕು ಜನ ಆರೋಪಿಗಳಾದ ನಿಮ್ಮನ್ನು ವಿಚಾರಣೆ ಮಾಡಿ, ನಿಮ್ಮಗಳ ಸ್ವಇಚ್ಛಾ ಹೇಳಿಕೆಗಳನ್ನು ದಾಖಲು ಮಾಡಿರುತ್ತಾರೆ. ನಂತರ ನಾಲ್ಕು ಜನ ಆರೋಪಿಗಳಾದ ನಿಮ್ಮನ್ನು ಅವರೊಂದಿಗೆ ಸಿಬ್ಬಂದಿಗಳ ಬೆಂಗಾಲಿನೊಂದಿಗೆ ಕರೆದುಕೊಂಡು ಕೃತ್ಯ ಸ್ಥಳವಾದ ಬಿಬಿಟಿಸಿ ಕಂಪೆನಿಗೆ ಸೇರಿದ ಚೌಡಿಕಾಡು ಕಾಫಿ ತೋಟದಲ್ಲಿ ಪಂಚರಾದ ಚಾಸಾ–6 ಹಾಗೂ 7 ರವರನ್ನು ಬರಮಾಡಿಕೊಂಡು, ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ, ಪಂಚರಾಗಿ ಕೋರಿಕೊಂಡ ಮೇರೆಗೆ, ಅದಕ್ಕೆ ಅವರು ಒಪ್ಪಿಕೊಂಡ ಮೇರೆಗೆ ಸದರಿ ಕೃತ್ಯ ಸ್ಥಳದ ಮಹಜರು ಕ್ರಮ ಜರುಗಿಸಿರುತ್ತಾರೆ. ಸಮಯ ಮಧ್ಯಾಹ್ನ 1.45 ರಿಂದ 2.30 ರವರೆಗೆ ಜರುಗಿಸಿರುತ್ತೇನೆ. ಸದರಿ ಮಹಜರಿನ ಸಮಯದಲ್ಲಿ ಫೋಟೋ ಹಾಗೂ

ಚಿತ್ರೀಕರಣವನ್ನು ಚಾಸಾ–10 ರವರಿಂದ ಮಾಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.31. **ಫ್ರಾಸಾ–14** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಅದೇ ಪಂಚರೊಂದಿಗೆ ಪ್ರಕರಣದ 4 ನೇ ಆರೋಪಿಯಾದ ನಿಮ್ಮ ವಾಸದ ಮನೆಗೆ ಕರೆದುಕೊಂಡು ಹೋಗಿ, ಕೃತ್ಯಕ್ಕೆ ಬಳಸಿದ ಕೆಎ–13 ಎಂ–4035 ನೋಂದಣಿ ಸಂಖೆಯ ಬೊಲೆರೋ ಜೀಪು ಕೆಎ–14 ವೈ–1200 ನೋಂದಣಿ ಸಂಖ್ಯೆಯ ಟಿವಿಎಸ್ ಕಂಪೆನಿಯ ಸ್ಕೂಟರ್, ಪ್ಲಾಸ್ಟಿಕ್ ಥಾಟ್, ಉದ್ದನೆಯ ಹಗ್ಗ, ಎರಡು ಮರದ ಹಿಡಿಯಿರುವ ಕಬ್ಬಿಣದ ಕತ್ತಿ, ಎರಡು ಚೂರಿಗಳು, ಒಂದು ಚಾಕು, ಒಂದು ರೌಂಡ್ ಆಕಾರದ ಮರದ ದಿಮ್ಮಿ , ಎರಡು ಚಾರ್ಜಬಲ್ ಲೈಟ್, ಒಂದು ವಿದ್ಯೂನ್ಮಾನ ತೂಕದ ಯಂತ್ರ, ಎರಡು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲಗಳನ್ನು ಪಂಚರ ಸಮಕ್ಷಮ ಮಹಜರು ಕ್ರಮ ಜರುಗಿಸಿ, ಅವುಗಳನ್ನು ಅಮಾನತ್ತು ಪಡಿಸಿಕೊಳ್ಳಲಾಯಿತು. ಸದರಿ ಮಹಜರನ್ನು ಸಮಯ ಮಧ್ಯಾಹ್ಯ 3.00 ರಿಂದ 4.00 ಗಂಟೆಯವರೆಗೆ ಜರುಗಿಸಿರುತ್ತೇನೆ ಮಹಜರಿನ ಸಮಯದಲ್ಲಿ ಚಾಸಾ–10 ರವರ ಮೂಲಕ ಫೋಟೋ ಹಾಗೂ ವೀಡಿಯೋ ಚಿತ್ರೀಕರಣ ಮಾಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.32. **ಫ್ರಾಸಾ–14** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಅದೇ ಪಂಚರೊಂದಿಗೆ ಪ್ರಕರಣದ 3 ನೇ ಆರೋಪಿಯಾದ ನಿಮ್ಮ ವಾಸದ ಮನೆಗೆ ಕರೆದುಕೊಂಡು ಹೋಗಿ, ಕೃತ್ಯಕ್ಕೆ ಬಳಸಿದ ಒಂದು ದ್ವಿಚಕ್ರ ವಾಹನವಾದ ಕೆಎ–12 ಕ್ಯೂ–1704 ನೊಂದಣಿ ಸಂಖ್ಯೆಯ ರಾಯಲ್ ಎನ್ ಫೀಲ್ಡ್ ಬೈಕ್ ಹಾಗೂ ಐನೂರು ಮುಖ ಬೆಲೆಯ ರೂ.20,000/–ನಗದು ಹಣವನ್ನು ಪಂಚರ ಸಮಕ್ಷಮ ಮಹಜರು ಕ್ರಮ ಜರುಗಿಸಿ, ಅವುಗಳನ್ನು ಅಮಾನತ್ತು

ಪಡಿಸಿಕೊಳ್ಳಲಾಯಿತು. ಸದರಿ ಮಹಜರನ್ನು ಸಮಯ ಸಂಜೆ 4.45 ರಿಂದ 5.45 ಗಂಟೆಯವರೆಗೆ ಜರುಗಿಸಿರುತ್ತಾರೆ. ಮಹಜರಿನ ಸಮಯದಲ್ಲಿ ಚಾಸಾ–10 ರವರ ಮೂಲಕ ಫೋಟೋ ಹಾಗೂ ವೀಡಿಯೋ ಚಿತ್ರೀಕರಣ ಮಾಡಿಸಿರುತ್ತಾರೆ. ನಂತರ ಅದೇ ದಿನ ಸದರಿ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.33. **ಫ್ರಾಸಾ–14** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ಅದೇ ದಿನ ಚಾಸಾ–6 ರಿಂದ 13 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ. ನಂತರ ಸದರಿ ಪ್ರಕರಣದಲ್ಲಿ ಐಪಿಸಿ ಕಲಂ 371 ನ್ನು ಹೆಚ್ಚುವರಿ ಅಳವಡಿಸಿಕೊಂಡು, ನ್ಯಾಯಾಲಯದ ಮರಣೋತ್ತರ ಪರೀಕ್ಷೆಯ ವರದಿಯನ್ನು ಪಡೆದುಕೊಂಡಿರುತ್ತಾರೆ. ನಂತರ ದಿನಾಂಕ 01.06.2021 ರಂದು ಸದರಿ ಪ್ರಕರಣದಲ್ಲಿ ವಶಪಡಿಸಿಕೊಂಡ ಸ್ವತ್ತುಗಳ ಬಗ್ಗೆ ಮಾನ್ಯ ಉಪ ವಿಭಾಗಾಧಿಕಾರಿ, ಮಡಿಕೇರಿಯವರಿಗೆ ವರದಿಯನ್ನು ಸಲ್ಲಿಸಿರುತ್ತಾರೆ. ನಂತರ ದಿನಾಂಕ 19.07.2021 ರಂದು ಕೃತ್ಯ ಸ್ಥಳದ ಬಗ್ಗೆ ದಾಖಲಾತಿಗಳನ್ನು ನೀಡುವಂತೆ ಬಿಬಿಟಿಸಿ ಕಂಪೆನಿಯವರಿಗೆ ಸೂಚಿಸಿರುತ್ತಾರೆ. ನಂತರ ವರದಿಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.34. **ಫ್ರಾಸಾ–14** ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ನಂತರ ದಿನಾಂಕ 19.05.2021 ರಂದು ಪ್ರಕರಣದ 5 ನೇ ಆರೋಪಿಯಾದ ಬಶೀರ್ ಆದ ನಿಮ್ಮಿಂದ ಸ್ವಇಚ್ಛಾ ಹೇಳಿಕೆಯನ್ನು ಪಡೆದು, ನಂತರ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ. ನಂತರ ದಿನಾಂಕ 04.08.2021 ರಂದು ಸದರಿ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿಗಳ ವಿರುದ್ಧ ದೋಷಾರೋಪ ಸಾಬೀತಾದ್ದರಿಂದ ತನಿಖೆಯನ್ನು

ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ False.

ಪ್ರ.35 ಈ ಮೊಕದ್ದಮೆಯ ಬಗ್ಗೆ ನೀವೇನಾದರೂ ಹೇಳುವುದಿದೆಯೇ?

ಉಃ No.

ಪ್ರ.36 ನಿಮ್ಮ ಪರ ಸಾಕ್ಷ್ಯವಿಚಾರಣೆ ನಡೆಸಲಿಚ್ಛಿಸುವಿರಾ?

ಉಃ  No.

ಈ ಮೇಲಿನ ಪ್ರಶ್ನೆಗಳನ್ನು ಆರೋಪಿಗಳಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ, ಅವರು ಕೊಟ್ಟ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ಸರಿಯಾದ ಮತ್ತು ನಿಜವಾದ ಹೇಳಿಕೆಯೆಂದು ಧೃಢೀಕರಿಸುತ್ತೇನೆ.

ಸಹಿಃ

**ಸ್ಥಳಃ ವಿರಾಜಪೇಟೆ** **ಪ್ರದೀಪ ಪೋತದಾರ**

**ದಿಃ** 02.12.2025. **ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**

**ವಿರಾಜಪೇಟೆ.**